ಸಂಖ್ಯೆ:ಕಂಇ:42:ಇಎಲ್ಆರ್

# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 23-5-2000.

## ಸುತ್ತೋಲೆ

ವಿಷಯ: 7ನೇ ಕೃಷಿ ಗಣತಿ ಕಾರ್ಯಕ್ರಮ–2000–01ನೇ ವರ್ಷವನ್ನು 'ಭೂದಾಖಲಾತಿ ವರ್ಷ' ಎಂದು ಘೋಷಿಸುವ ಬಗ್ಗೆ.

---

1. ಸರ್ಕಾರವು 2001–2002ನೇ ಇಸವಿಯಲ್ಲಿ 7ನೇ ಕೃಷಿ ಗಣತಿ ಕಾರ್ಯವನ್ನು ಕೈಗೊಂಡಿದೆ. ಕೃಷಿ ಗಣತಿಗೆ 2000–2001ನೇ ಕೃಷಿ ವರ್ಷದ ದಾಖಲಾತಿಗಳನ್ನು ಆಧಾರವಾಗಿಟ್ಟು ಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಕೃಷಿ ವರ್ಷ ಹಾಗೂ ಕಂದಾಯ ವರ್ಷಗಳು ಜುಲೈ 1 ರಿಂದ ಆರಂಭವಾಗಿ ಜೂನ್ 30ಕ್ಕೆ ಅಂತ್ಯಗೊಳ್ಳುತ್ತವೆ. ಯಾವುದೇ ಕೃಷಿ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹ ಮಾಡಲು ಕೃಷಿ ಭೂಮಿಯ ಭೂದಾಖಲೆಗಳು ಅವಶ್ಯವಾಗಿವೆ. ರಾಜ್ಯದ ಹಾಗೂ ರಾಷ್ಟ್ರದ ಆಹಾರದ ಅಗತ್ಯತೆಯನ್ನು ಪೂರೈಸಲು ಸರ್ಕಾರ ಕೃಷಿ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ. ಈ ಕಾರ್ಯಕ್ರಮಗಳನ್ನು ರೂಪಿಸಲು ಕೃಷಿ ಗಣತಿಯಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ಪ್ರಮುಖ ಆಧಾರವಾಗಿಟ್ಟುಕೊಳ್ಳಲಾಗುವುದು. ರಾಷ್ಟ್ರದ ಅಭಿವೃದ್ಧಿಯಲ್ಲಿ ಇದು ಬಹಳ ಪ್ರಮುಖ ಪಾತ್ರ ವಹಿಸಿರುವುದರಿಂದ ಇದಕ್ಕೆ ಸಂಬಂಧಪಟ್ಟ ಭೂ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದು ಅಷ್ಟೇ ಮಹತ್ವವಾಗಿದೆ. ಇದನ್ನು ಪರಿಗಣಿಸಿ ಸರ್ಕಾರವು 2000–2001ನೇ ವರ್ಷವನ್ನು 'ಭೂ ದಾಖಲೆಗಳ ವರ್ಷ'ವೆಂದು ಘೋಷಿಸಿದೆ.

2. ಭೂದಾಖಲೆಗಳನ್ನು ಕಂದಾಯ ಇಲಾಖೆಯು ನಿರ್ವಹಿಸುತ್ತಿದ್ದು, ಗ್ರಾಮ ಮಟ್ಟದಲ್ಲಿ ಗ್ರಾಮ ಲೆಕ್ಕಿಗರು ಇವುಗಳನ್ನು ನಿರ್ವಹಿಸುತ್ತಿದ್ದಾರೆ. ಭೂ ದಾಖಲೆಗಳ ಇಂದೀಕರಿಸುವಾಗ (Updating) ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಬೇಕಾಗುತ್ತದೆ.

1. ಭೂಮಿಗೆ ಸಂಬಂಧಿಸಿದಂತೆ ಸರ್ವೆ ದಾಖಲೆಗಳು
2. ಭೂಮಿಯ ಒಡೆತನ(ಹಕ್ಕಿನ) ದಾಖಲೆಗಳು,
3. ಭೂಮಿಯಲ್ಲಿ ಬೆಳೆದ ಬೆಳೆಯ ದಾಖಲಾತಿಗಳು

3. ಭೂದಾಖಲೆಗಳನ್ನು ಇಂದೀಕರಿಸುವಾಗ (Updating) ಭೂ ಪರಿವರ್ತನೆ, ಭೂ ಮಂಜೂರಾತಿ, ಭೂ ಸ್ವಾಧೀನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ಭೂಮಿಗಳ ಪಕ್ಕಾ ಪೋಡಿ, ಹಿಸ್ಸಾ ಮುಂತಾದ ಕ್ರಮಗಳಿಗಾಗಿ ಸರ್ವೆ ಇಲಾಖೆಯಲ್ಲಿ ಬಾಕಿ ಇದ್ದಲ್ಲಿ ಅವುಗಳ ತ್ವರಿತ ವಿಲೆಗೆ ಸರ್ವೆ ಇಲಾಖೆಯು ಅಗತ್ಯ ಕ್ರಮ ತೆಗೆದು ಕೊಳ್ಳುವುದು. ಸರ್ವೆ: ಪೋಡಿ ಕಾರ್ಯ ಪೂರ್ಣವಾದಂತೆ ಅವುಗಳನ್ನು ಸಂಬಂಧಪಟ್ಟ ಗ್ರಾಮ ದಾಖಲೆಗಳಲ್ಲಿ ನಮೂದಿಸಲು ಅಗತ್ಯ ಕ್ರಮ ಜರುಗಿಸುವುದು.

4. ಜಮೀನಿನ ಹಕ್ಕುದಾರಿಕೆಗೆ ಸಂಬಂಧಿಸಿದಂತೆ ಅನೇಕ ಪ್ರಕರಣಗಳು ಇನ್ನು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅನೇಕ ಸಂದರ್ಭದಲ್ಲಿ ಖಾತೆದಾರರು ಪೌತಿಯಾಗಿದ್ದು, ಅವರ ವಾರಸುದಾರರಿಗೆ ದಾಖಲೆಗಳಲ್ಲಿ ಬದಲಾವಣೆ ಆಗಿರುವುದಿಲ್ಲ. ಖಾತೆ ಪ್ರಕರಣಗಳು, ಹಕ್ಕು ವರ್ಗಾವಣೆ ಪ್ರಕರಣಗಳು, ಪಾಲುದಾರಿಕೆ ಪ್ರಕರಣಗಳು ಇವುಗಳ ಬಗ್ಗೆ ವ್ಯಾಪಕ ಕಾರ್ಯಕ್ರಮವು ರೂಪಿಸಿ ಖಾತಾ ಬದಲಾವಣೆಗೆ ಗಮನ ಆದ್ಯತೆ ನೀಡಬೇಕಾಗಿದೆ. ಈ ಬಗ್ಗೆ ಪ್ರತಿಯೊಂದು ಗ್ರಾಮದಲ್ಲೂ ಸಾಕಷ್ಟು ಪ್ರಚಾರ ಮಾಡಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ವಿಲೇ ಮಾಡಲು ಒಂದು ನಿರ್ದಿಷ್ಟ ಕಾರ್ಯ ಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಚಿಸಿದೆ.

5. ಭೂದಾಖಲಾತಿಗಳನ್ನು ಇಂದೀಕರಿಸುವಾಗ ಕೆಳಕಂಡ ಅಂಶಗಳ ಬಗ್ಗೆ ಕಂದಾಯ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಬೇಕಾಗಿದೆ.

(1) ಅನೇಕ ಸಂದರ್ಭಗಳಲ್ಲಿ ಕೃಷಿ ಭೂಮಿಯು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತನೆಯಾಗಿದ್ದರೂ ಇದನ್ನು ಆರ್.ಟಿ.ಸಿ. ದಾಖಲಾತಿಗಳಲ್ಲಿ ನಮೂದಿಸದೇ ಇರುವುದು ಕಂಡು ಬಂದಿದೆ. ಇತ್ತೀಚಿನ ದಿನಗಳಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ನೀರಾವರಿ ಯೋಜನೆಗಳು ಕೈಗಾರಿಕಾ ಯೋಜನೆಗಳಿಗೆ ಭೂಮಿ ಮಂಜೂರಾಗಿದ್ದು: ಭೂಸ್ವಾಧೀನವಾಗಿದ್ದು ಈ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಮೀನುಗಳನ್ನು ಕೃಷಿಯೇತರ ಉದ್ದೇಶಕ್ಕಾಗಿ ವರ್ಗಾಯಿಸಿರುವುದನ್ನು ದಾಖಲಿಸುವುದು ಅತೀ ಅವಶ್ಯವಾಗಿದೆ.

(2) ಸರ್ಕಾರವು ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡಿ ಆದೇಶಿಸಿ ಹಕ್ಕು ಪತ್ರವನ್ನು ನೀಡಿದೆ. ಇದೇ ರೀತಿ ಭೂ ಸುಧಾರಣೆ ಪ್ರಕರಣಗಳು, ಇನಾಂ ರದ್ದತಿ ಪ್ರಕರಣಗಳಲ್ಲೂ, ಅನೇಕ ಫಲಾನುಭವಿಗಳಿಗೆ ಹಕ್ಕು ಪತ್ರವನ್ನು ನೀಡಿದ್ದು ಇವೆಲ್ಲವನ್ನು ಭೂದಾಖಲಾತಿಗಳಲ್ಲಿ ನಮೂದಿಸಬೇಕಾಗುತ್ತದೆ.

(3) ವಿಶ್ವವಿದ್ಯಾನಿಲಯ, ಸ್ವಯಂಸೇವಾ ಸಂಸ್ಥೆಗಳು ಸಮುದಾಯ ಸಹಕಾರ ಸಂಘಗಳು, ಗಣಿಗಾರಿಕೆ ಹಾಗೂ ಇತರೆ ಉದ್ದೇಶಕ್ಕಾಗಿ ಸಾಕಷ್ಟು ಭೂಮಿಯನ್ನು ದೀರ್ಘಾವಧಿಯ ಗುತ್ತಿಗೆ ನೀಡಿರುವುದನ್ನು ಆರ್.ಟಿ.ಸಿ.ದಾಖಲಾತಿಗಳಲ್ಲಿ ದಾಖಲಿಸುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕಾಗಿದೆ.

(4) ಸರ್ಕಾರವು 'ಸಿ' ಮತ್ತು 'ಡಿ' ವಿಭಾಗದ ಜಮೀನುಗಳನ್ನು ಅರಣ್ಯ ಇಲಾಖೆಗೆ ಈ ಹಿಂದೆ ಕೆಲವು ಸಂದರ್ಭಗಳಲ್ಲಿ ವರ್ಗಾಯಿಸಿರುವ ಬಗ್ಗೆ ಹಾಗೂ ಇತ್ತೀಚೆಗೆ ಕೆಲವು ಜಮೀನುಗಳನ್ನು ಲ್ಯಾಂಡ್ ಬ್ಯಾಂಕಿಗೆ ವರ್ಗಾಯಿಸಿರುವುದನ್ನು ಸಹ ಆರ್.ಟಿ.ಸಿ. ದಾಖಲೆಗಳಲ್ಲಿ ನಮೂದಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕು.

6. ಭೂ ದಾಖಲೆಗಳನ್ನು ಇಂದೀಕರಿಸುವಾಗ ಬೆಳೆಗಳ ವಿವರ, ನೀರಾವರಿ ಮೂಲ ಇವುಗಳನ್ನು ಕರಾರುವಕ್ಕಾಗಿ ನಮೂದಿಸಬೇಕಾಗುತ್ತದೆ. ಈ ವಿವರಗಳನ್ನು ಖಾರೀಫ್, ರಬಿ, ಬೇಸಿಗೆ ಬೆಳೆಗಳಿಗೆ ಪ್ರತ್ಯೇಕವಾಗಿ ಕಡ್ಡಾಯವಾಗಿ ಬರೆಯತಕ್ಕದ್ದು. ಹಿಂದಿನ ವರ್ಷಗಳಲ್ಲಿ ಕೃಷಿ ಅಂಕಿ ಅಂಶಗಳನ್ನು ಸಂಗ್ರಹಿಸುವಾಗ ಹಲವಾರು ನ್ಯೂನ್ಯತೆಗಳನ್ನು ಗಮನಿಸಿದೆ.

1. ವಾಸ್ತವವಾಗಿ ರೈತರು ಬೆಳೆಯುತ್ತಿರುವ ಬೆಳೆಗೂ, ಆರ್.ಟಿ.ಸಿ.ಯಲ್ಲಿ ತೋರಿಸುವ ಬೆಳೆಗೂ ತಾಳೆ ಇಲ್ಲದೇ ಇರುವುದು.
2. ಬೆಳೆಯ ವಿಸ್ತೀರ್ಣದಲ್ಲಿ ವ್ಯತ್ಯಾಸವಿರುವುದು.
3. ನೀರಾವರಿ ಮೂಲವನ್ನು ಸರಿಯಾಗಿ ದಾಖಲಿಸದೇ ಇರುವುದು.
4. ಕೆಲವು ಸಂದರ್ಭಗಳಲ್ಲಿ ತೆಂಗು, ಕಾಫಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾಗ್ಯೂ ರಾಗಿ, ಜೋಳ ಎಂದು ನಮೂದಿಸುತ್ತಿರುವುದು.
5. ಬೆಳೆಯನ್ನು ಬೆಳೆಯುವಾಗ ಹೈಬ್ರಿಡ್ ಅಥವಾ ಸ್ಥಳೀಯ ಎಂಬುದನ್ನು ನಮೂದಿಸದೇ ಇರುವುದು.
6. ಮಿಶ್ರ ಬೆಳೆಗಳು ಇದ್ದಾಗ ಇವುಗಳಲ್ಲಿ ಎಲ್ಲವನ್ನು ನಮೂದಿಸದೇ ಇರುವುದು.
7. ಹಣ್ಣು ತರಕಾರಿ ಇತರೆ ತೋಟಗಾರಿಕೆ ಬೆಳೆಗಳನ್ನು ಸರಿಯಾಗಿ ನಮೂದಿಸದೆ ಇರುವುದು.
8. ನೀರಾವರಿ ಮೂಲವನ್ನು, ಅದರಲ್ಲೂ ಮುಖ್ಯವಾಗಿ ನೀರಾವರಿ ಯೋಜನೆಗಳು ಕಾಲುವೆಗಳು, ಸಣ್ಣ ನೀರಾವರಿ ಇಲಾಖೆ ಕೆರೆಗಳಿಂದ ಅಥವಾ ವೈಯಕ್ತಿಕ ಕೊಳವೆ ಬಾವಿಗಳಿಂದ ಸರಬರಾಜು ಆಗುವುದನ್ನು ಸ್ಪಷ್ಟವಾಗಿ ದಾಖಲಿಸಬೇಕು.

ಈ ವರ್ಷ ಪಹಣಿ ಪತ್ರಿಕೆ ಬರೆಯುವಾಗ ಈ ಲೋಪದೋಷಗಳು ಪುನರಾವರ್ತನೆ ಆಗದಂತೆ ಎಚ್ಚರ ವಹಿಸಲು ಸೂಚಿಸಿದೆ.

7. ಜಿಲ್ಲಾಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಗ್ರಾಮ ಲೆಕ್ಕಿಗರಿಗೆ ಈ 'ಭೂ ದಾಖಲಾತಿ ವರ್ಷ' ದ ಮಹತ್ವದ ಬಗ್ಗೆ ಭೂದಾಖಲಾತಿಗಳನ್ನು ನಿರ್ವಹಿಸುವ ಬಗ್ಗೆ ತರಬೇತಿ ನೀಡಲು ಅಗತ್ಯ ಕ್ರಮ ತೆಗೆದುಕೊಳ್ಳುವುದು. ಈ ತರಬೇತಿಯಲ್ಲಿ ಕಂದಾಯ ಇಲಾಖೆ; ಭೂ ಮಾಪನ ಇಲಾಖೆ, ಕೃಷಿ ಇಲಾಖೆ ಮತ್ತು ಸಾಂಖ್ಯಿಕ ಇಲಾಖೆ ಅಧಿಕಾರಿಗಳು ಭಾಗವಹಿಸಿ ಗ್ರಾಮಲೆಕ್ಕಿಗರಿಗೆ ಸೂಕ್ತ ಮಾಹಿತಿ : ಮಾರ್ಗದರ್ಶನ ನೀಡತಕ್ಕದ್ದು.

8. ರಾಜ್ಯದ ರೆವಿನ್ಯೂ ಇಲಾಖೆಯ ಎಲ್ಲಾ ಅಧಿಕಾರಿಗಳು: ಸಿಬ್ಬಂದಿಗಳು ಈ ಕಾರ್ಯಕ್ರಮವನ್ನು ಹೆಚ್ಚಿನ ಶ್ರದ್ಧೆಯಿಂದ ಕೈಗೊಂಡು ಪ್ರತಿಯೊಂದು ಗ್ರಾಮದ ಎಲ್ಲಾ ಭೂ ದಾಖಲಾತಿಗಳನ್ನು ಕ್ರಮಬದ್ಧವಾಗಿ ಇಂದೀಕರಿಸಲು ಆದೇಶಿಸಿದೆ. ಜಿಲ್ಲಾಧಿಕಾರಿಗಳು ಮಾಸಿಕ ಕಂದಾಯಾಧಿಕಾರಿಗಳ ಸಭೆಯಲ್ಲಿ ಈ ಕಾರ್ಯಕ್ರಮದ ಪ್ರಗತಿಯನ್ನು ತಪ್ಪದೇ ಪರಿಶೀಲಿಸಿ ಅಗತ್ಯ ಸೂಚನೆಗಳನ್ನು ನೀಡುವುದು. ಈ ಪ್ರಗತಿಯ ವಿವರಗಳನ್ನು ತಪ್ಪದೇ ಅನುಬಂಧ – 1 ಮತ್ತು ಅನುಬಂಧ–2ರಲ್ಲಿ ಸರ್ಕಾರಕ್ಕೆ ವರದಿ ಮಾಡುವುದು.

ಈ ಸುತ್ತೋಲೆಯ ಸ್ವೀಕೃತಿಯನ್ನು ಮರು ಟಪಾಲಿನಲ್ಲಿ ತಪ್ಪದೇ ತಿಳಿಸುವುದು.
ಈ ಸುತ್ತೋಲೆ ಕಂದಾಯ ಇಲಾಖೆಯ Internet bite (http: rev. dept. Kar.Nic.in) ದಲ್ಲಿ ದೊರೆಯುತ್ತದೆ.

(ಸಹಿ)
ಸರ್ಕಾರದ ಉಪ ಕಾರ್ಯದರ್ಶಿಗಳು,
ಕಂದಾಯ ಇಲಾಖೆ (ಭೂ ಕಂದಾಯ)

<u>ಇವರಿಗೆ:</u>

1) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ,
2) ಎಲ್ಲಾ ವಿಭಾಗಾಧಿಕಾರಿಗಳು,
3) ಎಲ್ಲಾ ಜಿಲ್ಲಾಧಿಕಾರಿಗಳು,
4) ಎಲ್ಲಾ ಉಪ ವಿಭಾಗಾಧಿಕಾರಿಗಳು,
5) ಎಲ್ಲಾ ತಹಶೀಲ್ದಾರರುಗಳು,
6) ನಿರ್ದೇಶಕರು, ಭೂಮಾಪನ ಇಲಾಖೆ, ಬೆಂಗಳೂರು,
7) ರಾಜ್ಯ ಕೃಷಿ ಗಣತಿ ಆಯುಕ್ತರು(ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು)
8) ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು,
9) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

<u>ನಕಲು ಪ್ರತಿ:</u>